ವಿ-330 (44)

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330 ರಡಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ</u>

- - 0 - -

<u>ವಿಷಯ</u>

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ: 74ರಲ್ಲಿ 4.00 ಎಕರೆ ಕೆ.ಐ.ಎ.ಡಿ.ಬಿ. ಅಧೀನದ ಸರ್ಕಾರಿ ಜಮೀನನ್ನು ಭೂಗಳ್ಳರು ಕೆ.ಐ.ಎ.ಡಿ.ಬಿ. ಉನ್ನತ ಅಧಿಕಾರಿಗಳ ಜೊತೆ ಶಾಮೀಲಾಗಿ, ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬಡಾವಣೆ ರಚನೆ ಮಾಡಿ, ಸರ್ಕಾರಿ ಜಮೀನನ್ನು ಅಮಾಯಕ ಗ್ರಾಹಕರಿಗೆ ವಂಚಿಸಿ, ಅಕ್ರಮವಾಗಿ ಮಾರಾಟ ಮಾಡುತ್ತಿದ್ದು, ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡುತ್ತಿರುವುದರಿಂದ ಸಾರ್ವಜನಿಕ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

<u>ಉತ್ತರ:</u>

ಬೆಂಗಳೂರು ನಗರ ಜಿಲ್ಲೆ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬಂಡಿಕೊಡಿಗೇಹಳ್ಳಿ ಗ್ರಾಮದ ಒಟ್ಟು 450-05 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಲು ದಿನಾಂಕ: 07.05.2007ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಈ ಅಧಿಸೂಚನೆಯಲ್ಲಿ ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ: 74ರಲ್ಲಿ ಒಟ್ಟು 41-00 ಎಕರೆ ಸರ್ಕಾರಿ ಗೋಮಾಳ ಜಮೀನು ಸಹ ಒಳಗೊಂಡಿದ್ದು, ಸದರಿ ಜಮೀನು ಹಲವಾರು ಜನರಿಗೆ ಮಂಜೂರಾಗಿರುವ ಕಾರಣ, ಕಂದಾಯ ದಾಖಲಾತಿಗಳನ್ನು ಆಧರಿಸಿ ಅಂತಿಮ ಅಧಿಸೂಚನೆಯಲ್ಲಿ ಜಮೀನಿನ ಖಾತೆದಾರರ ಹೆಸರನ್ನು ಒಟ್ಟಾಗಿ ನಮೂದಿಸಲಾಗಿದೆ.

ಬಂಡಿಕೊಡಿಗೇಹಳ್ಳಿ ಗ್ರಾಮದ ಸರ್ವೆ ನಂ: 74ರ 41 ಎಕರೆ ಜಮೀನಿನ ಪೈಕಿ 4-00 ಎಕರೆ ಜಮೀನಿಗೆ ಶ್ರೀಮತಿ ಲಕ್ಷ್ಮಮ್ಮ ಕೋಂ ಮುನಿಶಾಪಣ್ಣ ಇವರು ಅಧಿಸೂಚಿತ ಖಾತೆದಾರರಾಗಿದ್ದು, ಈ

ಜಮೀನು ಕರ್ನಲ್ ಮಹೇಂದ್ರ ಸಿಂಗ್ ಖೈರಾ ಇವರಿಗೆ ಮಾರಾಟವಾಗಿದ್ದು, ಸದರಿಯವರಿಗೆ ಪರಿಹಾರದ ಮೊತ್ತ ರೂ.1,60,00,000/-ಗಳನ್ನು ದಿನಾಂಕ: 29.09.2008ರಲ್ಲಿ ಪಾವತಿಸಲಾಗಿದೆ.

ಪ್ರಶ್ನಿತ ಈ 4-00 ಎಕರೆ ಜಮೀನಿನಲ್ಲಿ ಅನಧಿಕೃತ ಬಡಾವಣೆ ನಿರ್ಮಾಣ ಮಾಡುತ್ತಿರುವುದು ಕೆ.ಐ.ಎ.ಡಿ.ಬಿ.ಯ ಗಮನಕ್ಕೆ ಬಂದ ಕೂಡಲೇ ಬಾಗಲೂರು ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 0227/2021 ರನ್ವಯ ಪ್ರಥಮ ವರ್ತಮಾನ ವರದಿ (FIR) ದಾಖಲಾಗಿದೆ.

ಮುಂದುವರೆದು, ಈ ಅನಧಿಕೃತ ಬಡಾವಣೆಯನ್ನು ತೆರವುಗೊಳಿಸಿ, ಈ 4-00 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ.ಯ ಸುಪರ್ದಿಗೆ ಪಡೆಯಲಾಗಿದೆ.

ಸಂಖ್ಯೆ: ಸಿಐ 251 ಐಎಪಿ (ಇ) 2021

(ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು